

ತೆರೆಯುತ್ತಿರುವುದರ ಸೂಚನೆಯಾಗಿಯೇ ಕಂಡಿತ್ತು.

ಹಾಗೆ ನೋಡಿದರೆ ಅಲ್ಲಿಂದ ನಿಜವಾಗಲೂ ಕಿರಣ್ ಅವರ ಅದೃಷ್ಟದ ಬಾಗಿಲು ತೆರೆದುಕೊಂಡಿತ್ತು. 'ರಿಕ್ಕಿ' ನಂತರ 'ಕಥಾಸಂಗಮ'ಕ್ಕೆ ಒಂದು ಕಿರುಚಿತ್ರ ಮಾಡಿಕೊಟ್ಟರು. ನಂತರ 'ಕಿರಿಕ್ ಪಾರ್ಟಿ' ಸಿನಿಮಾಗೆ ಮುಖ್ಯ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದರು. ಆಗಲೇ ಸ್ವತಂತ್ರವಾಗಿ ಸಿನಿಮಾ ನಿರ್ದೇಶಿಸುವ ಆಸೆ ಅವರ ಮನಸಲ್ಲಿ ಹೆಮ್ಮರವಾಗಿ ಬೆಳೆದಿತ್ತು.

'ನನ್ನಮೊದಲ ಸಿನಿಮಾ ಹೇಗಿರಬೇಕು? ಎಂಥ ಸಿನಿಮಾದ ಮೂಲಕ ನಾನು ಚಿತ್ರರಂಗದಲ್ಲಿ ಗುರ್ತಿಸಿಕೊಳ್ಳಬೇಕು ಎಂದು ಯೋಚಿಸುತ್ತಿದ್ದೆ. ಆಗ ನನಗೆ ಹೊಳೆದಿದ್ದು ಡಾಗ್ ಬೇಸ್ಡ್ ಸಿನಿಮಾ ಮಾಡಬೇಕು ಎನ್ನುವುದು. ನಾನು ಪ್ರಾಣಿಪ್ರಿಯ. ನಮ್ಮ ಮನೆಯಲ್ಲಿ ಬಡತನವಿದ್ದರೂ ಸಾಕಷ್ಟು ಸಾಕುಪ್ರಾಣಿಗಳಿದ್ದವು. ಅಲ್ಲದೇ ಚಿತ್ರರಂಗದಲ್ಲಿ ಹೀಗೆ ನಾಯಿಯನ್ನು ಕೇಂದ್ರವಾಗಿಟ್ಟುಕೊಂಡು ಸಿನಿಮಾ ಮಾಡಿರುವ ಪ್ರಯತ್ನಗಳು ಕಡಿಮೆ. ಹಾಗಾಗಿ ಅದೇ ವಸ್ತುವನ್ನು ಆಯ್ದುಕೊಂಡೆ. ಸುಮಾರು ಒಂದೂವರೆ ವರ್ಷಗಳ ಕಾಲ ಕೂತು ಸಾಕಷ್ಟು ಸಂಶೋಧನೆಯನ್ನೂ ಮಾಡಿ ಕಥೆಯನ್ನು ಸಿದ್ಧಪಡಿಸಿದೆ. ಆಗ 'ಕಿರಿಕ್ ಪಾರ್ಟಿ'ಯಲ್ಲಿ ನಟಿಸಿದ್ದ ಅರವಿಂದ್ ಅಯ್ಯರ್‌ಗೆ ಕಥೆ ಹೇಳಿದೆ. ಅವರು ನಟಿಸಲು ಒಪ್ಪಿಕೊಂಡರು. 'ಕಿರಿಕ್ ಪಾರ್ಟಿ' ಎಡಿಟಿಂಗ್ ಸಮಯದಲ್ಲಿ ರಕ್ಷಿತ್ ಶೆಟ್ಟಿ ಅವರಿಗೂ ಸುಮ್ಮನೆ ಈ ಕಥೆ ಹೇಳಿದೆ. ಅವರಿಗೆ ತುಂಬ ಇಷ್ಟವಾಗಿ ನಾನು ಈ ಸಿನಿಮಾ ಮಾಡ್ತೇನೆ ಎಂದು ಹೇಳಿದರು. ಆದರೆ ಆಗಲೇ ನಾನು ಅರವಿಂದ್‌ಗೆ ಹೇಳಿಬಿಟ್ಟಿದ್ದೆ. ರಕ್ಷಿತ್ ಆಗ, 'ಹಾಗಾದರೆ ನಾನು ಈ ಸಿನಿಮಾ ನಿರ್ಮಾಣ ಮಾಡುತ್ತೇನೆ. ಕಿರಿಕ್ ಪಾರ್ಟಿ ಬಿಡುಗಡೆ ಆಗುವವರೆಗೂ ಕಾಯಿರಿ' ಎಂದು ಹೇಳಿದರು.

ಈ ನಡುವೆ ನಾವು ಅರವಿಂದ್ ಇಟ್ಟುಕೊಂಡು ಒಂದು ಫೋಟೊ ಶೂಟ್ ಮಾಡಿದೆವು. ಅದು ಸಾಕಷ್ಟು ವೈರಲ್ ಕೂಡ ಆಯಿತು. ಹೋಗುತ್ತ ಹೋಗುತ್ತ ನನಗೆ ಈ ಸಿನಿಮಾ ನಾನು ಅಂದುಕೊಂಡಿದ್ದಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂದು ಅರಿವಾಯ್ತು. ಅರವಿಂದ್ ಕೈಯಲ್ಲಿ ಆಗ 'ಭೀಮಸೇನ ನಳಮಹಾರಾಜ' ಸಿನಿಮಾ ಇತ್ತು. ಮತ್ತೊಂದೆರಡು ಸಿನಿಮಾಗಳ ಚರ್ಚೆ ನಡೆಯುತ್ತಿತ್ತು. ನನಗೆ ಬೇಕಾದಷ್ಟು ಸಮಯ ಕೊಡುವುದು ಅವರಿಗೆ ಕಷ್ಟವಾಗಿದ್ದರಿಂದ ಸಿನಿಮಾದಿಂದ ಅವರು ಹೊರಗೆ ಹೋಗಬೇಕಾಯ್ತು. ಮತ್ತೆ ರಕ್ಷಿತ್ ಬಳಿಗೆ ಹೋದೆ. ಅವರು ಆಗ 'ಅವನೇ ಶ್ರೀಮನ್ನಾರಾಯಣ' ಸಿನಿಮಾ ಮಾಡುತ್ತಿದ್ದರು. 'ನಾನು ಖಂಡಿತ ನಿಮಗೆ ಬೇಕಾದಷ್ಟು ಸಮಯ ಕೊಡುತ್ತೇನೆ. ಆದರೆ ಈಗ ನನ್ನ ಸಿನಿಮಾ ಶುರುವಾಗುತ್ತಿದೆ. ಅದರ ನಡುವೆ ಸಮಯ ಹೊಂದಿಸಿಕೊಳ್ಳಬೇಕು' ಎಂದು ಹೇಳಿದರು. ನಾನು ಒಪ್ಪಿಕೊಂಡೆ. ಹೀಗೆ ರಕ್ಷಿತ್ ಆ ಸಿನಿಮಾ ನಾಯಕರಾದರು. ಐದು ಭಾಷೆಗಳಲ್ಲಿ ಮಾಡುವ ಐಡಿಯಾ ಕೊಟ್ಟಿದ್ದೂ ಅವರೇ. ಈಗ ಸಿನಿಮಾ ಬಿಡುಗಡೆಯ ಹಂತಕ್ಕೆ ಬಂದಿದೆ. ಈಗಾಗಲೇ ಇದರ ಕೆಲಸ ಶುರುವಾಗಿ ನಾಲ್ಕೂವರೆ ವರ್ಷಗಳು ಕಳೆದಿವೆ'ಎಂದು ತಮ್ಮ ಮೊದಲ ಸಿನಿಮಾ '777 ಚಾರ್ಲಿ'ಯ ಕಥೆ ಹೇಳುತ್ತಾರೆ ಕಿರಣ್.

ಇನ್ನೇನು '777 ಚಾರ್ಲಿ'ಯ ಬಿಡುಗಡೆಯ ದಿನಾಂಕವನ್ನು ಘೋಷಿಸುವ ಹಂತದಲ್ಲಿ ಅವರಿದ್ದಾರೆ. ಐದು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿರುವ ಈ ಸಿನಿಮಾದ ಬಿಡುಗಡೆಗೆ ಎಲ್ಲ ಭಾಷೆಗಳಲ್ಲಿಯೂ ಗಣ್ಯಸಂಸ್ಥೆಗಳು ಕೈಜೋಡಿಸುತ್ತಿರುವುದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

'ನಾನು ಮಾಡಿದ ಎಲ್ಲ ಸಿನಿಮಾಗಳೂ ಈಗಷ್ಟೇ ಅಲ್ಲ, ಇನ್ನು ಇಪ್ಪತ್ತು ವರ್ಷಗಳ ನಂತರ ನೋಡಿದರೂ ಪ್ರಸ್ತುತ ಅನಿಸಬೇಕು' ಎಂದು ಛಲ ಹೊಂದಿರುವ ಅವರಿಗೆ ಎಲ್ಲ ಜಾನರ್‌ಗಳಲ್ಲಿಯೂ ಅಂಥ ಸಾರ್ವಕಾಲಿಕ ಸಿನಿಮಾಗಳನ್ನು ಮಾಡುವ ಹಂಬಲವಿದೆ. 'ಬೆರಳೆಣಿಕೆ ಸಿನಿಮಾ ಮಾಡಿದ್ರೂ ನೆನಪಲ್ಲಿ ಉಳಿಯುವ ಸಿನಿಮಾ ಮಾಡಬೇಕು' ಎಂಬ ಹಂಬಲದ ಕಿರಣ್, ತಮ್ಮ ಮೊದಲ ಸಿನಿಮಾಕ್ಕೆ ಸಿಗುವ ಸ್ಪಂದನಕ್ಕಾಗಿ ಎದುರು ನೋಡುತ್ತಿದ್ದಾರೆ. ■



# ನಾಟಿ ಕೋಳಿ... ನಾಟಿ ಹುಂಜ..!

'ಲವ್ ಯೂ ರಚ್ಚು' ಸಿನಿಮಾ ಬಿಡುಗಡೆಯಾಗಿ, ಗಲ್ಲಾಪೆಟ್ಟಿಗೆಯಲ್ಲಿ ಸಾಧಾರಣ ಸದ್ದು ಮಾಡಿ ಮರೆಗೆ ಸರಿದಿದೆ. ಈಗ ಅಜಯ್ ರಾವ್ ಅವರ ಮತ್ತೊಂದು ಸಿನಿಮಾ 'ಶೋಕಿವಾಲ' ಸದ್ದು ಮಾಡಲು ಶುರುಮಾಡಿದೆ. 'ಶೋಕಿವಾಲ' ಅಜಯ್‌ರಾವ್ ಅವರ 27ನೇ ಸಿನಿಮಾ. ತಿಮ್ಮೇಗೌಡ ಎಂಬವರು ನಿರ್ದೇಶಿಸುತ್ತಿರುವ ಈ ಚಿತ್ರವನ್ನು ಟಿ. ಆರ್. ಚಂದ್ರಶೇಖರ್ ನಿರ್ಮಾಣ ಮಾಡುತ್ತಿದ್ದಾರೆ.

ಈ ಹಿಂದೆಯೇ ಒಂದು ಲಿರಿಕಲ್ ವಿಡಿಯೊ ಬಿಡುಗಡೆ ಮಾಡಿ ಗಮನ ಸೆಳೆದಿದ್ದ 'ಶೋಕೀವಾಲ' ಈಗ ಮತ್ತೊಂದು ಲಿರಿಕಲ್ ವಿಡಿಯೊ ಬಿಡುಗಡೆ ಮಾಡಿದೆ. 'ನಾಟಿ ಕೋಳಿ ನೀನು, ನಾಟಿ ಹುಂಜ ನಾನು' ಎಂದು ಶುರುವಾಗುವ ಈ ಹಾಡನ್ನು ಸಂಗೀತ ನಿರ್ದೇಶಕ ಶ್ರೀಧರ್ ವಿ. ಸಂಭ್ರಮ್ ಅವರು ಹಾಡಿರುವುದು ವಿಶೇಷ. ಅವರ ಜೊತೆಗೆ ಜೋಗಿ ಸುನೀತ ಧ್ವನಿಗೂಡಿಸಿದ್ದಾರೆ. ಕನ್ನಡ ಮತ್ತು ತೆಲುಗು ಎರಡೂಭಾಷೆಯಲ್ಲಿ ಈ ಸಿನಿಮಾ ಬಿಡುಗಡೆಯಾಗುತ್ತಿದ್ದು, ಲಿರಿಕಲ್ ವಿಡಿಯೊ ಕೂಡ ಎರಡೂ ಭಾಷೆಗಳಲ್ಲಿ ಬಿಡುಗಡೆಯಾಗಿದೆ. ಕನ್ನಡದಲ್ಲಿ ವಿ. ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿದ್ದರೆ, ತೆಲುಗಿನಲ್ಲಿ ಗೌಸ್‌ಪೀರ್ ಬರೆದಿದ್ದಾರೆ.

ಅಜಯ್ ರಾವ್ ಮತ್ತು ಸಂಜನಾ ಆನಂದ್ ಸಖತ್ ಕಲರ್‌ಫುಲ್ ಆಗಿ ಕಾಣಿಸಿಕೊಂಡಿದ್ದಾರೆ ಎನ್ನುವುದಕ್ಕೂ ಈ ಲಿರಿಕಲ್ ವಿಡಿಯೊದಲ್ಲಿಯೇ ಸಾಕಷ್ಟು ಸಾಕ್ಷಿಗಳಿವೆ. ಇದೊಂದು ಹಳ್ಳಿಯಲ್ಲಿ ನಡೆಯುವ ಕಥೆಯಾಗಿದ್ದು, ಮಂಡ್ಯ, ಚನ್ನಪಟ್ಟಣ, ಮದ್ದೂರಿನ ಸುತ್ತಮುತ್ತಲಿನ ಜಾಗಗಳಲ್ಲಿ ಚಿತ್ರೀಕರಣ ಮಾಡಲಾಗಿದೆ. ■